3421 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಸರ್ಕಾರವು ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಹೊಸ ಬಸ್ ನಿಲ್ದಾಣದ ನಿರ್ಮಾಣವನ್ನು ಕೈಗೊತ್ತಿಕೊಂಡಿರುವುದೇ?*

ಆ) *ಹಾಗಿದ್ದಲ್ಲಿ ಇಲ್ಲಿಯವರೆಗೆ ಮಾಡಲಾದ ಖರ್ಚಿಷ್ಟು ಹಾಗೂ ಯಾವಾಗ ಉಪಯೋಗಕ್ಕೆ ಸಿದ್ಧವಾಗುವುದು?*

ಇ) *ನಿರ್ಮಾಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಕೈಗೆತ್ತಿಕೊಂಡಿರದಿದ್ದಲ್ಲಿ ಕಾರಣಗಳೇನು? ಹಾಗೂ ಯಾವಾಗ ಈ ಕಾರ್ಯವನ್ನು ಕೈಗೊಳ್ಳಲಾಗುವುದು?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ನಿರ್ಮಾಣ ಕಾರ್ಯವನ್ನು ಭೂಸ್ವಾಧೀನ ಪಡಿಸಿಕೊಂಡು ನಂತರ ಆರಂಭಿಸಲಾಗುವುದು.

ತುಮಕೂರಿನ ಅಂತರಸನ ಹಳ್ಳಿಯ ಕೈಗಾರಿಕಾ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಸರಬರಾಜು.

3420 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ತುಮಕೂರಿನಲ್ಲಿ ಅಂತರಸನ ಹಳ್ಳಿಯ ಕೈಗಾರಿಕಾ ಪ್ರದೇಶಕ್ಕೆ ಸಾಕಷ್ಟು ಪ್ರಮಾಣದ ವಿದ್ಯುಚ್ಛಕ್ತಿಯ ಸರಬರಾಜನ್ನು ಖಾತ್ರಿಗೊಳಿಸಲು ಒಂದು ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗಿದೆಯೇ?*

ಆ) *ಇಲ್ಲದಿದ್ದರೆ, ಯಾವಾಗ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗುವುದು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಇಲ್ಲ. ತುಮಕೂರಿನ ಅಂತರಸನ ಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಉದ್ದೇಶಿತ 66.11 ಕೆ.ವಿ. ವಿದ್ಯುತ್ ಉಪ-ಕೇಂದ್ರದಲ್ಲಿ 12.5 ಎಂ.ವಿ.ಎ. ಸಾಮರ್ಥ್ಯದ ಒಂದು ವಿದ್ಯುತ್ ಪರಿವರ್ತಕವನ್ನು ಸ್ಥಾಪಿಸುವ ಉದ್ದೇಶವಿದೆ.

ಆ) ಮೇಲ್ಕಂಡ ವಿದ್ಯುತ್ ಪರಿವರ್ತಕವನ್ನು ಸಾಧ್ಯವಾದಷ್ಟು ಜಾಗ್ರತೆ ಅಳವಡಿಸಲಾಗುವುದು.

CONDUCTING A ENQUIRY ON VISHWABHAVATH SEVA SAMITHI, ALWANAGALLI SHAHAPUR - BELGAUM.

3318 - Sri. B.I. PATIL (Uchagam) : Will the Minister for Education and Parliamentary Affairs be pleased to state?

a) *Whether the enquiry of Vishvabharat Seva Samithi Alwan Galli, Shahapur, Belgaum was conducted by the Deputy Director of Public Instruction, Belgaum previously for mismanagement.?*

b) *If so, the action taken by the Government against the said institution?*

c) *If not, the reason thereof?*

Sri. M. VEERAPPAMOILY (Minister for Education and Parliamentary